# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

## ಸಿಸಿ ನಂಃ 574/2025

ಪಿರ್ಯಾದಿ : ಶ್ರೀ ನಾಗೇಶ್.ಎಂ.ಎನ್ ಬಿನ್ ನಾಗಯ್ಯ
ವಯಸ್ಸು: 32 ವರುಷ,
ವಾಸ: ಅನಿತ ಕಾನ್ವೆಂಟ್ ರಸ್ತೆ, ಎನ್‌ಇಎಸ್ ಬಡಾವಣೆ,
ಮಳವಳ್ಳಿ ಟೌನ್ & ತಾಲ್ಲೂಕು,
ಮಂಡ್ಯ ಜಿಲ್ಲೆ.

- ವಿರುದ್ಧ -

ಆರೋಪಿ : ಶ್ರೀಮತಿ ಎಂ.ಎಸ್.ನೇತ್ರಾವತಿ ಕೋಂ ಸಿದ್ಧಾರ್ಥ
ವಯಸ್ಸು: 35 ವರುಷ,
ವಾಸ: ನಂ.1493, 2 ನೇ ಮಹಡಿ, 4 ನೇ ಮೇನ್,
8 ನೇ ಕ್ರಾಸ್, ಸರ್ದಾರ್ ವಲ್ಲಭಾಯಿ ಪಟೇಲ್ ನಗರ,
ಚಾಮುಂಡಿ ಬೆಟ್ಟ ರಸ್ತೆ, ಮೈಸೂರು ಟೌನ್ & ಜಿಲ್ಲೆ.

ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.

1) ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2) ಪ್ರಾಸಾ1 ಶ್ರೀ ನಾಗೇಶ್.ಎಂ.ಎನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಅವರಿಗೆ ಪರಿಚಯಸ್ಥರಾಗಿದ್ದು, ಅದ್ದರಿಂದ ದಿನಾಂಕ **15.05.2022** ರಂದು ನೀವು ಅವರಿಂದ **4** ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದು, ಅದನ್ನು **3** ತಿಂಗಳುಗಳ ಒಳಗಾಗಿ ಹಿಂದುರುಗಿಸುವುದಾಗಿ ಭರವಸೆ ನೀಡಿರುತ್ತೀರಿ. ದಿನಾಂಕ **15.08.2022** ರಂದು ಪಿರ್ಯಾದುದಾರರು ಆರೋಪಿಯಾದ ನಿಮ್ಮನ್ನು ಬೇಟಿ ಮಾಡಿ ಸಾಲದ ಮೊತ್ತವನ್ನು ಹಿಂದುರುಗಿಸುವಂತೆ ಕೇಳಿದಾಗ, ಆರೋಪಿಯಾದ ನೀವು **705054** ನಂಬರಿನ ಮೈಸೂರಿನ ನಾಡನಹಳ್ಳಿ ಶಾಖೆಯ, ಕೆನರಾ ಬ್ಯಾಂಕಿನ ಚೆಕ್ಕನ್ನು ದಿನಾಂಕ **16.08.2022** ಎಂದು ನಮೂದಿಸಿ ಅವರಿಗೆ ನೀಡಿ ಅದನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿರುತ್ತೀರಾ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ **?**

ಉತ್ತರಃ

3) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಅವರು ನೀವು ನೀಡಿದ ಚೆಕ್ಕನ್ನು ಮಳವಳ್ಳಿ ಶಾಖೆಯ ಕರ್ನಾಟಕ ಬ್ಯಾಂಕಿಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿನಾಂಕ **17.08.2022** ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ದಿನಾಂಕ **23.08.2022** ರಂದು ಅವರು ಆರೋಪಿಯಾದ ನಿಮಗೆ ತಿಳುವಳಿಕೆ ನೋಟೀಸನ್ನು ಕಳುಹಿಸಿದ್ದು, ಅದನ್ನು ನೀವು ಸ್ವೀಕರಿಸಿರುವುದಿಲ್ಲ. ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಅವರಿಗೆ ಚೆಕ್ಕನ್ನು ನೀಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ **?**

ಉತ್ತರಃ

**4)** ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ**?**

ಉತ್ತರಃ

5) ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ**?**

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕ **07.03.2026.**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.